ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ:03/ಇಸಿಎಸ್(1)/2020

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
email:dte.commissioner@gmail.com

ದಿನಾಂಕ:23-09-2020

## ಸುತ್ತೋಲೆ

ವಿಷಯ: COVID-19 Pandemic ಹಿನ್ನೆಲೆಯಲ್ಲಿ ಮೌಲ್ಯಮಾಪನ ಕೇಂದ್ರಗಳಲ್ಲಿ ಅನುಸರಿಸಬೇಕಾದ "ಪ್ರಮಾಣಿತ ಕಾರ್ಯಚರಣಾ ವಿಧಾನ"ಗಳನ್ನು (Standard Operating Procedure) ನೀಡುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ:ಆಕುಕನಿ/ಆಪ್ತ/29/2020-21 ದಿನಾಂಕ:17/06/2020

************

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, COVID-19 Pandemic ಹಿನ್ನೆಲೆಯಲ್ಲಿ 2020 ಸೆಪ್ಟಂಬರ್ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ಥಿಯರಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವು 15 ವಿಕೇಂದ್ರೀಕೃತ ಮೌಲ್ಯಮಾಪನ ಕೇಂದ್ರಗಳಲ್ಲಿ ನಡೆಯಲಿದ್ದು, ನೋಡಲ್ ಮೌಲ್ಯಮಾಪನ ಕೇಂದ್ರಗಳ ನೋಡಲ್ ಅಧಿಕಾರಿಗಳು/ ಶಿಬಿರಾಧಿಕಾರಿಗಳು/ ಸಹಾಯಕ ಶಿಬಿರಾಧಿಕಾರಿಗಳು/ ಪ್ರಿನ್ಸಿಪಾಲರುಗಳು/ ಉಪನ್ಯಾಸಕರು/ ಸಿಬ್ಬಂದಿ ಮತ್ತು ಮೌಲ್ಯಮಾಪಕರು ತೆಗೆದುಕೊಳ್ಳಬೇಕಾದ ಕಾರ್ಯಸಾಧುವಾದ "ಪ್ರಮಾಣಿತ ಕಾರ್ಯಚರಣಾ ವಿಧಾನ" ಗಳನ್ನು (Standard Operating Procedure) ಈ ಕೆಳಕಂಡಂತೆ ನೀಡಲಾಗಿದೆ. ಪ್ರಯುಕ್ತ ಮೌಲ್ಯಮಾಪನ ಕೇಂದ್ರಕ್ಕೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು/ಉಪನ್ಯಾಸಕರು/ ಮೌಲ್ಯಮಾಪಕರು ಸಿಬ್ಬಂದಿಯವರ ಆರೋಗ್ಯ ಸುರಕ್ಷತೆ ದೃಷ್ಟಿಯಿಂದ ಕೊರೊನ ಸಾಂಕ್ರಾಮಿಕ ಸೋಂಕು ಹರಡದಂತೆ ಮುನ್ನೆಚ್ಚರಿಕಾ ಕ್ರಮವಹಿಸಿ ಮೌಲ್ಯಮಾಪನ ಕಾರ್ಯವನ್ನು ಯಶಸ್ವಿಯಾಗಿ ನಡೆಸಲು ತಿಳಿಸಲಾಗಿದೆ.

**ನೋಡಲ್ ಮೌಲ್ಯಮಾಪನ ಕೇಂದ್ರಗಳ ಪ್ರಿನ್ಸಿಪಾಲರು/ ಶಿಬಿರಾಧಿಕಾರಿಗಳು/ ಸಹಾಯಕ ಶಿಬಿರಾಧಿಕಾರಿಗಳು/ ಉಪನ್ಯಾಸಕರು/ ಸಿಬ್ಬಂದಿಯವರು ಅನುಸರಿಸಬೇಕಾದ ಪ್ರಮಾಣಿತ ಕಾರ್ಯಚರಣಾ ವಿಧಾನಗಳು (Standard Operating Procedure)**

1. ನೋಡಲ್ ಪಾಲಿಟೆಕ್ನಿಕ್ ಸಂಸ್ಥೆಗಳು ಕೇಂದ್ರ ಧನ ಸಹಾಯ ಆಯೋಗ (ಯುಜಿಸಿ), ರಾಜ್ಯ ಸರ್ಕಾರದ ಆರೋಗ್ಯ ಇಲಾಖೆ ಮತ್ತು ಸ್ಥಳೀಯ ಆಡಳಿತ ನೀಡಿರುವ ಎಲ್ಲಾ ಸುರಕ್ಷಿತ ಕ್ರಮಗಳನ್ನು ಪಾಲಿಸುವುದು.

2. ನೋಡಲ್ ಪಾಲಿಟೆಕ್ನಿಕ್ ಸಂಸ್ಥೆಗಳು ಮೌಲ್ಯಮಾಪಕರುಗಳ ಆರೋಗ್ಯ ಮತ್ತು ಸುರಕ್ಷತೆ ಬಗ್ಗೆ ಗರಿಷ್ಟ ಮಟ್ಟದ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವುದು.

3. ಸಂಸ್ಥೆಗಳಲ್ಲಿ ವೈದ್ಯರು ಮತ್ತು ಅರೆವೈದ್ಯಕೀಯ ಸಿಬ್ಬಂದಿ ಮತ್ತು ಆಂಬ್ಯುಲೆನ್ಸ್ ವಾಹನಗಳು ತುರ್ತು ಸಂದರ್ಭಗಳಲ್ಲಿ ತತ್‌ಕ್ಷಣ ಲಭ್ಯವಾಗುವಂತೆ ವ್ಯವಸ್ಥೆ ಮಾಡುವುದು. ಸ್ಥಳೀಯ ಆಡಳಿತ/ ಆರೋಗ್ಯ ಇಲಾಖೆಯ ಅಧಿಕಾರಿಗಳು/ ಜಿಲ್ಲಾಡಳಿತ ಇವರುಗಳಿಗೆ ಮೌಲ್ಯಮಾಪನ ಕಾರ್ಯ ನಡೆಯುವ ಬಗ್ಗೆ ಲಿಖಿತವಾಗಿ ತಿಳಿಸಿ, ಮೌಲ್ಯಮಾಪನ ಅವಧಿಯಲ್ಲಿ ನಿರಂತರ ಸಂಪರ್ಕದಲ್ಲಿದ್ದು, ಅವರುಗಳ ಮಾರ್ಗದರ್ಶನ ಮತ್ತು ಪೂರ್ಣ ಸಹಕಾರದೊಂದಿಗೆ ಮೌಲ್ಯಮಾಪನ ಕಾರ್ಯವು ಸುಲಲಿತವಾಗಿ ನಡೆಯುವಂತೆ ನೋಡಿಕೊಳ್ಳುವುದು.

4. ನೋಡಲ್ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರುಗಳು "ಪ್ರಮಾಣಿತ ಕಾರ್ಯಾಚರಣಾ ಪದ್ದತಿ" (SOP) ಗಳನ್ನು ಜಾರಿಗೊಳಿಸುವಲ್ಲಿ ಸಂಪೂರ್ಣ ಜವಾಬ್ದಾರರಾಗಿದ್ದು "COVID-19 SOP Implimentation Task Force" ರಚಿಸಲು ಸೂಚಿಸಲಾಗಿದೆ.

5. ಸಂಸ್ಥೆಗಳಲ್ಲಿ ಮೌಲ್ಯಮಾಪನ ನಡೆಯುವ ಸಮಯದಲ್ಲಿ ಪ್ರಮಾಣಿತ ಕಾರ್ಯಾಚರಣಾ ಪದ್ಧತಿ (ಎಸ್‌ಒಪಿ) ಗಳನ್ನು ಜಾರಿಗೊಳಿಸಲು "COVID-19 SOP Implimentation Task Force"ನ ಎಲ್ಲಾ ಸಿಬ್ಬಂದಿ/ ಉಪನ್ಯಾಸಕರುಗಳು ಹಾಜರಿರಲು ಸೂಚಿಸುವುದು.

6. ಮೌಲ್ಯಮಾಪನ ಕೇಂದ್ರಗಳಲ್ಲಿ ಸಾಮಾಜಿಕ/ ವ್ಯಕ್ತಿಗತ ಅಂತರವನ್ನು ಕಾಯ್ದುಕೊಳ್ಳಲು ಅನುವಾಗುವಂತಹ ಪೋಸ್ಟರ್, ಚಿಹ್ನೆ/ಸಂಕೇತಗಳನ್ನು ಅಲ್ಲಲ್ಲಿ ಪ್ರದರ್ಶಿಸುವುದು. ಅಗತ್ಯಕ್ಕೆ ತಕ್ಕಂತೆ ಸೋಪ್/ಸ್ಯಾನಿಟೈಜರ್, ಕುಡಿಯುವ ನೀರು, ಸ್ವಚ್ಛ ಶೌಚಾಲಯ /ಶೌಚಾಲಯಗಳಲ್ಲಿ ನೀರಿನ ಸೌಲಭ್ಯ ಹಾಗೂ Pedal push cover ಕಸದ ಬುಟ್ಟಿಗಳ ನೈರ್ಮಲ್ಯ ಹಾಗೂ ಆರೋಗ್ಯ ಸುರಕ್ಷತ ಕ್ರಮಗಳನ್ನು ಕಾಪಾಡುವುದು.

7. ಮೌಲ್ಯಮಾಪನ ಕೇಂದ್ರಗಳಲ್ಲಿ ಮೌಲ್ಯಮಾಪನ ಕಾರ್ಯ ಚಟುವಟಿಕೆಗಳಲ್ಲಿ ನಿರತರಾದ ಎಲ್ಲಾ ಉಪನ್ಯಾಸಕರು, ಪರೀಕ್ಷಾ ಕಾರ್ಯಕಾರಿ ಸಿಬ್ಬಂದಿ, ಹೌಸ್‌ಕೀಪಿಂಗ್ ಸಿಬ್ಬಂದಿ, ಭದ್ರತಾಸಿಬ್ಬಂದಿ ಮತ್ತು ಇತರೆ ಎಲ್ಲಾ ಸಿಬ್ಬಂದಿಯವರ ಸಂಪರ್ಕ ಮಾಹಿತಿಯನ್ನು ಮ್ಯಾನುಯಲ್ / ಡಿಜಿಟಲ್ ರೂಪದಲ್ಲಿ ನಿರ್ವಹಿಸುವುದು.

8. ಸಂಸ್ಥೆಯ ವಾಹನ ಹಾಗೂ ಇತರೆ ಸಾಗಾಣಿಕ ವಾಹನಗಳನ್ನು ಮೌಲ್ಯಮಾಪನ ಕೇಂದ್ರಕ್ಕೆ ವಾಹನದ ಮೂಲಕ ಮೌಲ್ಯಮಾಪನ ಮಾಡಲು ಬರುವ ಮೌಲ್ಯಮಾಪಕರುಗಳ ವಾಹನಗಳನ್ನು ಸ್ಯಾನಿಟೈಜ್ ಮಾಡಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸುವುದು.

9. ಮೌಲ್ಯಮಾಪನ ಕೇಂದ್ರಕ್ಕೆ ಪ್ರವೇಶ/ ಹೊರಹೋಗುವ ದ್ವಾರಗಳಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಲು ಅನುವಾಗುವಂತಹ ಪೋಸ್ಟರ್, ಚಿಹ್ನೆ/ಸಂಕೇತಗಳನ್ನು ಅಲ್ಲಲ್ಲಿ ಪ್ರದರ್ಶಿಸುವುದು. ಸದರಿ ದ್ವಾರಗಳು/ ಕ್ಯಾಂಟೀನ್/ಹ್ಯಾಂಡ್ ಸ್ಯಾನಿಟೈಜರ್ ಯಂತ್ರ/ ಶೌಚಾಲಯ ಗಳ ಹತ್ತಿರ ಜನಸಂದಣೆಯಾಗದಂತೆ ಕನಿಷ್ಟ 2 ಮೀಟರ್ ಅಂತರದ ಗುರುತಿನಲ್ಲಿ ಒಬ್ಬೊಬ್ಬರಾಗಿ ಹೋಗುವಂತೆ ನೋಡಿಕೊಳ್ಳುವುದು.

10. ಮೌಲ್ಯಮಾಪನ ಕೇಂದ್ರಗಳಲ್ಲಿ ಅಗತ್ಯವಿರುವ ಥರ್ಮಲ್ ಸ್ಕ್ಯಾನರ್‌ಗಳು, ಮಾಸ್ಕ್ ಮತ್ತು ಕೈಗವಸುಗಳು ಲಭ್ಯವಿರುವಂತೆ ನೋಡಿಕೊಳ್ಳುವುದು. "COVID-19 SOP Implimentation Task Force"ನ ಸಿಬ್ಬಂದಿಯವರು ಪ್ರವೇಶ / ಹೊರಹೋಗುವ ದ್ವಾರಗಳಲ್ಲಿ ಹಾದುಹೋಗುವವರ ಥರ್ಮಲ್ ಸ್ಕ್ಯಾನಿಂಗ್, ಮಾಸ್ಕ್ ಧರಿಸಿರುವ ಬಗ್ಗೆ ನಿಗಾ ವಹಿಸುವುದು.

11. ಸಿಬ್ಬಂದಿ ಪ್ರವೇಶದ ಸ್ಥಳದಲ್ಲಿ ಥರ್ಮಲ್ ಸ್ಕ್ಯಾನಿಂಗ್ ಕಡ್ಡಾಯವಾಗಿದ್ದು, ಯಾವುದೇ ಸಿಬ್ಬಂದಿಯ ಶರೀರದ ಉಷ್ಣತೆ ಥರ್ಮಲ್ ಸ್ಕ್ಯಾನಿಂಗ್‌ನ ನಿಗದಿತ ಉಷ್ಣತಾ ಮಾನದಂಡವನ್ನು ಮೀರಿದ್ದಲ್ಲಿ ಅಂತಹ ಸಿಬ್ಬಂದಿಯು ಕೂಡಲೇ ಮೌಲ್ಯಮಾಪನ ಕೇಂದ್ರ ಬಿಡುವಂತೆ ಸೂಚಿಸುವುದು.

12. ಮೌಲ್ಯಮಾಪನ ಕಾರ್ಯ ಚಟುವಟಿಕೆಗಳಲ್ಲಿ ನಿರತರಾದ ಎಲ್ಲಾ ಉಪನ್ಯಾಸಕರು/ ಪರೀಕ್ಷಾ ಕಾರ್ಯಕಾರಿ ಸಿಬ್ಬಂದಿಯವರು ಪ್ರತಿ ದಿನ ಹೊಸ/ಶುಚಿಯಾದ ಮಾಸ್ಕ್ ಹಾಗೂ ಕೈಗವಸುಗಳನ್ನು ಧರಿಸುವುದು ಕಡ್ಡಾಯವಾಗಿರುತ್ತದೆ.

13. ಮೌಲ್ಯಮಾಪನ ಕೇಂದ್ರಗಳಲ್ಲಿನ ಶೌಚಾಲಯಗಳು, ಕಿಟಕಿ/ ಬಾಗಿಲುಗಳ ಕೈಪಿಡಿಗಳು, ಮೆಟ್ಟಿಲುಗಳ ಕೈಪಿಡಿಗಳು, ಲಿಫ್ಟ್ ಬಟನ್‌ಗಳು, ವ್ಹೀಲ್ ಚೇರ್‌ಗಳು ಇವುಗಳನ್ನು ಆಗಿಂದಾಗ್ಗೆ ಮತ್ತು ದಿನದ ಅಂತ್ಯದಲ್ಲಿ ಸ್ವಚ್ಛಗೊಳಿಸಿ ಸ್ಯಾನಿಟೈಜ್ ಮಾಡುವುದು.

14. ಮೌಲ್ಯಮಾಪನ ಕೇಂದ್ರದಲ್ಲಿ ಉಪಯೋಗಿಸಲಾಗಿರುವ ಮಾಸ್ಕ್/ಕೈಗವಸುಗಳು ಇನ್ನಿತರ ಎಲ್ಲಾ ರೀತಿಯ ತ್ಯಾಜ್ಯಗಳುಳ್ಳ Pedal push cover ಕಸದ ಬುಟ್ಟಿಗಳನ್ನು ಆರೋಗ್ಯ ಇಲಾಖೆಯ ಮಾರ್ಗಸೂಚಿಗಳಂತೆ ವಿಲೇವಾರಿ ಮಾಡುವುದು.

15. ಪ್ರತಿ ಮೌಲ್ಯಮಾಪನ ಕೊಠಡಿಯಲ್ಲಿನ ಮೌಲ್ಯಮಾಪಕರುಗಳ ಗರಿಷ್ಠ ಮಿತಿ 2.0 ಮೀ ಸಾಮಾಜಿಕ/ವ್ಯಕ್ತಿಗತ ಅಂತರವನ್ನು ಕಾಪಾಡುವ ಷರತ್ತಿಗೊಳಪಟ್ಟಿದ್ದು ಮೌಲ್ಯಮಾಪನ ಕೊಠಡಿಗಳಲ್ಲಿ ಬೆಂಚುಗಳ ಮಧ್ಯೆ 2.0 ಮೀ ಅಂತರವಿರುವುದು ಹಾಗೂ ಒಂದು ಬೆಂಚಿನಲ್ಲಿ ಇಬ್ಬರು ಮೌಲ್ಯಮಾಪಕರು ಮಾತ್ರ ಕುಳಿತುಕೊಳ್ಳುವಂತೆ ಕ್ರಮವಹಿಸುವುದು.

16. ಮೌಲ್ಯಮಾಪನ ಕೊಠಡಿಯಲ್ಲಿ ಪ್ರತಿಯೊಬ್ಬರು ಮೌಲ್ಯಮಾಪಕರು ತಮ್ಮದೇ ಒಂದು ಹ್ಯಾಂಡ್ ಸ್ಯಾನಿಟೈಜರ್ ಚಿಕ್ಕ ಬಾಟಲಿಯನ್ನು ತರುವಂತೆ ತಿಳಿಸುವುದು.

17. ಪ್ರತಿ ಪರೀಕ್ಷಾ ಕೊಠಡಿಗಳಲ್ಲಿನ ಗೋಡೆಗಳು, ಬಾಗಿಲುಗಳು, ಕಿಟಕಿಗಳು ಇತರೆ ಎಲ್ಲಾ ಮೇಲ್ಮೈಗಳನ್ನು ಸ್ಯಾನಿಟೈಜ್ ಮಾಡುವುದು ಮತ್ತು ಮೌಲ್ಯಮಾಪಕರು ಕುಳಿತುಕೊಳ್ಳುವ ಡೆಸ್ಕ್/ಬೆಂಚ್‌ಗಳನ್ನು ಪ್ರತಿ ದಿನಾಂತ್ಯದಲ್ಲಿ ತೀವ್ರತರವಾಗಿ ಸ್ಯಾನಿಟೈಜ್ ಮಾಡುವುದು.

18. ಕರ್ತವ್ಯನಿರತ ವಿಷಯ ಸಮಿತಿಗಳ ಮೇಲ್ವಿಚಾರಕರುಗಳು, ಮುಖ್ಯಮೌಲ್ಯಮಾಪಕರು, ಮೌಲ್ಯಮಾಪಕರುಗಳು ಆಗಾಗ್ಗೆ ಕೈಗಳನ್ನು ಶುಚಿಗೊಳಿಸುವುದು/ ಸ್ಯಾನಿಟೈಜ್ ಮಾಡಿಕೊಳ್ಳುವುದು, ನಿರಂತರವಾಗಿ ಮುಖಗವಸು ಮತ್ತು ಕೈಗವಸುಗಳನ್ನು ಧರಿಸುವುದು ಕಡ್ಡಾಯ.

19. ಮೌಲ್ಯಮಾಪಕರುಗಳು ಹಾಜರಿ ಪುಸ್ತಕದಲ್ಲಿ ಸಹಿ ಮಾಡಿದ ತಕ್ಷಣ ಉತ್ತರ ಪತ್ರಿಕೆಗಳ ಪ್ಯಾಕೆಟ್‌ಗಳು/ ಎಂ.ಎಲ್ ಗಳನ್ನು ಸ್ವೀಕರಿಸಿದ / ಹಿಂತಿರುಗಿಸುವ ಸಮಯದಲ್ಲಿ ಸ್ಯಾನಿಟೈಜ್ ಮಾಡಿಕೊಳ್ಳಲು ಮೇಲ್ವಿಚಾರಕರು ಮೌಲ್ಯಮಾಪಕರಿಗೆ ತಿಳಿಸುವುದು.

20. ನೋಡಲ್ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಅತ್ಯವಶ್ಯಕವಾಗಿ ಬೇಕಾಗಿರುವ Pedal push cover ಕಸದ ಬುಟ್ಟಿಗಳು, ಥರ್ಮಲ್ ಸ್ಕ್ಯಾನರ್‌ಗಳು, ಮುಖಗವಸುಗಳು, ಕೈಗವಸುಗಳು, ಹ್ಯಾಂಡ್ ಸ್ಯಾನಿಟೈಜರ್ ಬಾಟಲಿಗಳು, ಲಿಕ್ವಿಡ್ ಸೋಪ್ ಡಿಸ್ಪೆನ್ಸರ್‌ಗಳು, ಹ್ಯಾಂಡ್ ವಾಷ್/ಬೇಸಿನ್‌ಗಳ ದುರಸ್ತಿ ಇನ್ನಿತರೆ ಎಲ್ಲಾ ಪರಿಕರ/ಸಾಮಗ್ರಿಗಳನ್ನು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಲಭ್ಯವಿರುವ ಅನುದಾನವನ್ನು ಬಳಸಿ ಸಂಪೂರ್ಣವಾಗಿ ಸದ್ಬಳಕೆಯಾಗುವಷ್ಟು ಪರಿಮಾಣದಲ್ಲಿ ಮಾತ್ರ ನಿಯಮಾನುಸಾರ ಖರೀದಿಸಲು ಕ್ರಮವಹಿಸಬಹುದಾಗಿದೆ.

21. COVID-19 ಗುಣಲಕ್ಷಣವಿರುವ ಸಿಬ್ಬಂದಿ/ ಮೌಲ್ಯಮಾಪಕರುಗಳನ್ನು ಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಬಾರದು. (ಸರ್ಕಾರಿ COVID ಆಸ್ಪತ್ರೆ ವೈದ್ಯರಿಂದ COVID-19 ದೃಢೀಕರಣವಿದ್ದಲ್ಲಿ ಮಾತ್ರ)

22. ಮೌಲ್ಯಮಾಪನದ ಉತ್ತರ ಪತ್ರಿಕೆಗಳ ಪ್ಯಾಕೆಟ್ ಮೇಲೆ ಮೌಲ್ಯಮಾಪಕರು ಯಾವುದೇ ಕಾರಣಕ್ಕೂ ಸ್ಯಾನಿಟೈಜರ್ ಸಿಂಪಡಿಸುವಂತಿಲ್ಲ.

**ಮೌಲ್ಯಮಾಪಕರು ಅನುಸರಿಸಬೇಕಾದ "ಪ್ರಮಾಣಿತ ಕಾರ್ಯನಿರ್ವಹಣಾ ಕ್ರಮಗಳು" (Standard Operating Procedure)**

1. ಮೌಲ್ಯಮಾಪನ ಕೇಂದ್ರಗಳಲ್ಲಿ ಮೌಲ್ಯಮಾಪಕರು ಆಗಾಗ್ಗೆ ಕೈಗಳನ್ನು ಶುಚಿಗೊಳಿಸುವುದು, ಸದಾಕಾಲ ಎಲ್ಲಾ ಸ್ಥಳಗಳಲ್ಲೂ ಮುಖಗವಸು ಮತ್ತು ಕೈಗವಸುಗಳನ್ನು ಧರಿಸುವುದು, ಸ್ವಂತ ಬಳಕೆಗಾಗಿ ಹ್ಯಾಂಡ್ ಸ್ಯಾನಿಟೈಜರ್ ಬಾಟಲಿ ತರುವುದು ಕಡ್ಡಾಯ. ಮೌಲ್ಯಮಾಪಕರುಗಳು ಅಗತ್ಯ ಪರಿಕರಗಳ ಜೊತೆಗೆ ಅವಶ್ಯಕತೆಯಿದ್ದಲ್ಲಿ ಕುಡಿಯುವ ನೀರಿನ ಬಾಟಲಿ ತರಬಹುದಾಗಿದೆ. ಮೌಲ್ಯಮಾಪಕರು ಮೌಲ್ಯಮಾಪನ ಕೇಂದ್ರಗಳಲ್ಲಿ ಮೇಲ್ಕಂಡ ಯಾವುದೇ ಸಾಮಗ್ರಿ/ ಪರಿಕರಗಳನ್ನು ಪರಸ್ಪರ ಹಂಚಿಕೊಳ್ಳುವುದು ನಿಷಿದ್ಧ. ಹಾಜರಾತಿ ವಹಿಯಲ್ಲಿ ಸಹಿ ಮಾಡಿದ ತಕ್ಷಣ ಉತ್ತರ ಪತ್ರಿಕೆಗಳ ಪ್ಯಾಕೆಟ್‌ಗಳನ್ನು ಸ್ವೀಕರಿಸುವ ಮೊದಲು/ ಸ್ವೀಕರಿಸಿದ ನಂತರ/ ಹಿಂತಿರುಗಿಸುವ ಸಮಯಗಳಲ್ಲಿ/ ಎಂ.ಎಲ್ ಗಳನ್ನು ಸ್ವೀಕರಿಸುವ ಮೊದಲು/ಸ್ವೀಕರಿಸಿದ ನಂತರ/ ಹಿಂತಿರುಗಿಸುವ ಸಮಯಗಳಲ್ಲಿ ಕೈಗಳನ್ನು ಸ್ಯಾನಿಟೈಜ್ ಮಾಡಿಕೊಳ್ಳುವುದು ಅತ್ಯಂತ ಸೂಕ್ತವಾಗಿರುತ್ತದೆ.

2. ಮೌಲ್ಯಮಾಪಕರು ತಮ್ಮ ಕಾಲೇಜು ಐಡಿಗಳನ್ನು ಸದಾಕಾಲ ತಮ್ಮ ಬಳಿಯಿಟ್ಟುಕೊಂಡು ನಿರ್ಬಂಧಿತ ಸ್ಥಳಗಳಲ್ಲಿ ಓಡಾಡುವಾಗ ಪಾಸ್ ರೀತಿ ಬಳಸಬಹುದಾಗಿದೆ.

3. ಮೌಲ್ಯಮಾಪಕರುಗಳ ಆರೋಗ್ಯದ ಹಿತದೃಷ್ಟಿಯಿಂದ ಒಂದು ಡೆಸ್ಕನಲ್ಲಿ ಇಬ್ಬರು ಮೌಲ್ಯಮಾಪಕರು ಮಾತ್ರ ತಮ್ಮ ಕುಳಿತುಕೊಳ್ಳುವುದು ಹಾಗೂ ಕೊಠಡಿಯಲ್ಲಿನ ಪ್ರತಿ ಮೌಲ್ಯಮಾಪಕರ ಮಧ್ಯೆ 2.0 ಮೀಟರ್ ವ್ಯಕ್ತಿಗತ ಅಂತರವಿರುವಂತೆ ನೋಡಿಕೊಳ್ಳುವುದು.

4. ಮೌಲ್ಯಮಾಪಕರು ಪರೀಕ್ಷಾ ಕೇಂದ್ರಗಳಲ್ಲಿನ ದ್ವಾರಗಳು/ ಕ್ಯಾಂಟೀನ್/ಹ್ಯಾಂಡ್ ಸ್ಯಾನಿಟೈಜರ್ ಯಂತ್ರ/ ಶೌಚಾಲಯಗಳ ಹತ್ತಿರ ಜನಸಂದಣಿಯಾಗದಂತೆ ಕನಿಷ್ಠ 2.0 ಮೀಟರ್ ಅಂತರದ ಗುರುತಿನಲ್ಲಿ ಒಬ್ಬೊಬ್ಬರಾಗಿ ಹೋಗುವಂತೆ ನೋಡಿಕೊಂಡು ಸದಾಕಾಲ ಸಾಮಾಜಿಕ/ವ್ಯಕ್ತಿಗತ ಅಂತರವನ್ನು ಕಾಯ್ದುಕೊಂಡು ಜನದಟ್ಟಣೆಯಾಗದಂತೆ ಸದ್ವರ್ತನೆಯಿಂದ ನಡೆದುಕೊಳ್ಳುವುದು.

5. ಯಾವುದೇ ಉಪನ್ಯಾಸಕರು/ ಮೌಲ್ಯಮಾಪಕರು COVID-19 Positive ಆಗಿದ್ದಲ್ಲಿ ಅಥವಾ ಜ್ವರ ಕೆಮ್ಮು &/ಶೀತ ರೋಗ ಲಕ್ಷಣಗಳಿಂದ ಬಳಲುತ್ತಿದ್ದರೆ ತಮ್ಮ ಸಹೋದ್ಯೋಗಿಗಳ ಸುರಕ್ಷತೆಯ ದೃಷ್ಟಿಯಿಂದ ಕನಿಷ್ಠ 2 ದಿನ ಮುಂಚಿತವಾಗಿ ಸಂಸ್ಥೆಯ ಪ್ರಾಂಶುಪಾಲರು / ಶಿಬಿರಾಧಿಕಾರಿಗಳು ಇವರಿಗೆ ಮೌಲ್ಯಮಾಪನ ಕಾರ್ಯದಿಂದ ವಿನಾಯಿತಿ ಕೋರಿ ಮನವಿ ನೀಡುವುದು. COVID-19 Positive ಎಂದು ವರದಿ /ಪ್ರಮಾಣಪತ್ರವನ್ನು ಸಂಸ್ಥೆಯ ಪ್ರಾಂಶುಪಾಲರಿಗೆ /ಕ್ಯಾಂಪ್ ಅಧಿಕಾರಿಗಳಿಗೆ ಸಲ್ಲಿಸುವುದು.

6. ನೋಡಲ್ ಮೌಲ್ಯಮಾಪನ ಕೇಂದ್ರದ ಕ್ಯಾಂಪಸ್ ಶುಚಿತ್ವ ಕಾಪಾಡಲು ಎಲ್ಲರೂ ಸಕ್ರಿಯವಾಗಿ ಸಹಕರಿಸುವುದು.

7. COVID-19 Pandemic ಹಿನ್ನೆಲೆಯಲ್ಲಿ, ಮೌಲ್ಯಮಾಪಕರು ಮೌಲ್ಯಮಾಪನ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಸಲುವಾಗಿ, ತಮ್ಮ ತಮ್ಮ ಆರೋಗ್ಯದ ಕಡೆ ತಮ್ಮಿಂದಾಗುವ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳುವುದು ಹಾಗೂ ಸಧೃಡವಾಗಿ ಮಾನಸಿಕವಾಗಿ ಸ್ಥಿರತೆ ಕಾಯ್ದುಕೊಳ್ಳುವುದು.

ಸ್ಥಳೀಯ ಆಡಳಿತ/ ಜಿಲ್ಲಾಡಳಿತ/ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ/ UGC/AICTE /ರಾಜ್ಯ ಸರ್ಕಾರ/ಕೇಂದ್ರ ಸರ್ಕಾರ ಆಗಿಂದ್ದಾಗ್ಗೆ COVID-19 ನಿಯಂತ್ರಣದ ಸಂಬಂಧ ನೀಡುವ/ ಹೊರಡಿಸುವ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ನಿಗಾವಹಿಸಿ, ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಕ್ರಮವಹಿಸುವುದು.

ನಿರ್ದೇಶಕರು
ತಾಂತ್ರಿಕ ಶಿಕ್ಷಣ

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ – ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ:

1. ನೋಡಲ್ ಮೌಲ್ಯಮಾಪನ ಕೇಂದ್ರಗಳ ನೋಡಲ್‌ಅಧಿಕಾರಿಗಳು/ ಶಿಬಿರಾಧಿಕಾರಿಗಳು/ ಸಹಾಯಕ ಶಿಬಿರಾಧಿಕಾರಿಗಳು/ ಶಿಬಿರದ ಮೇಲ್ವಿಚಾರಕರುಗಳು –ಮಾಹಿತಿಗಾಗಿ ಹಾಗೂ ಶಿಬಿರದಲ್ಲಿ ಪರಿಚಲನೆ ಮೂಲಕ ಸುತ್ತೋಲಿಸಲು
2. ಆಪ್ತಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
3. ಆಪ್ತಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ, ತಾಂತ್ರಿಕ ಶಿಕ್ಷಣ ಭವನ
4. ಆಪ್ತಶಾಖೆ, ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ
5. ಕಂಪ್ಯೂಟರ್ ಕೇಂದ್ರ – ಬಿಟಿಇಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
6. ಇ– ಆಡಳಿತ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು